

ತಲೆಯ ಮೇಲೆ ಹೆಚ್ಚಿನ ದಾಳಿ ಮಾಡಿ ಅದರ ಚೈತನ್ಯವನ್ನೇ ಕಸಿಯುತ್ತದೆ. ಹಾವೂ ಕೂಡ ಒದ್ದಾಡುತ್ತಾ ಅದರ ಮುಖವನ್ನು ಬಳ್ಳಿಯಂತೆ ಬಳಸಿ ಸಿಂಬೆ ಹೊಡೆಯುತ್ತದೆ. ಸಾಧ್ಯವಾದಷ್ಟು ತನ್ನ ಪ್ರತಿರೋಧ ತೋರಿಸುತ್ತದೆ. ಆದರೆ, ರುಂಡವೇ ಇಲ್ಲದ ಹಾವಿನ ರೋಷ ಎಳ್ಳಷ್ಟೂ ಸಾಕಾಗುವುದಿಲ್ಲ. ಹೀಗೆ ಒಂದಷ್ಟು ಹೊತ್ತು ಉರಗವನ್ನು ನರಳಾಡಿಸಿ ನಂತರ ಇಡೀ ಹಾವನ್ನೇ ಬಕ ಶಿರದ ಮೂಲಕ ನುಂಗತೊಡಗುತ್ತದೆ. ಒಂದೊಮ್ಮೆ ಹಾವಿನ ಮೈಗೆ ತುಂಬಾ ಕೆಸರು ಮೆತ್ತಿದ್ದರೆ, ಅದನ್ನು ನೀರಿನಲ್ಲಿ ಅದ್ದಿ ಜಾಲಿಸಿಕೊಂಡು ನಂತರ ಗುಳಂ ಮಾಡುವಷ್ಟು ಕ್ಲೀನುಪಾರ್ಟಿ ಈ ಬಕ.

ಹಾವು ತೀವ್ರ ಹೋರಾಟ ಮಾಡುತ್ತಾ ಅದರ ಗಂಟಲಿನಿಂದ ಹೊರಕ್ಕೆ ಇಳಿಯುವ ಸಾಹಸ ಮಾಡುತ್ತಲೇ ಹೋಗುತ್ತದೆ. ತನ್ನ ಬಲಿಷ್ಠ ಕಾಲು ಮತ್ತು ಕೊಕ್ಕಿನಿಂದ ಹಾವಿನ ಮೈಮೇಲೆ ಮತ್ತೆ ಅಲ್ಲಲ್ಲಿ ಚುಚ್ಚಿ ಚುಚ್ಚಿ ಗಾಯಗೊಳಿಸುವ ಬಕ ಹಾವಿನ ಜೀವಶಕ್ತಿ ಕುಂದಿಸುತ್ತದೆ. ಹೆಚ್ಚು ಕಾಯದೆ ಅರೆಜೀವ ಇರುವ ಸರ್ಪವನ್ನೇ ಗಬಗಬ ನುಂಗಲು ಶುರು ಮಾಡುತ್ತದೆ. ಭಂಡ ಹಾವೂ ಕಡಿಯೇನಲ್ಲ. ಹಕ್ಕಿಯ ಹೊಟ್ಟೆಯೊಳಗೆ ಹೋಗದೆ ಕ್ಯಾತೆ ಮಾಡುತ್ತಾ ತನ್ನ ಹೋರಾಟ ಮುಂದುವರೆಸಬಲ್ಲದು. ಬಕದ ಗಂಟಲಿಗೆ ಕಿರಿಕಿರಿ ಮಾಡಿ ಎರ್ರಾಬಿರ್ರಿ ಉರುಳಾಡಿ ಅರ್ಧ ದಾರಿಯಲ್ಲೇ ಜಾಮಾಗಿ ಹಾವು ನಿಂತು ಬಿಡುವುದುಂಟು. ಆಗ ಬಕ ಹಾವನ್ನು ಪುಸಕ್ಕೆಂದು ಹೊರಗೆ ಉಗುಳುತ್ತದೆ. ಮತ್ತೆ ಹಾವಿನ ಮೇಲೆ ದಾಳಿ ನಡೆಸಿ ಸಾಯಿಸಿ, ತಲೆ ಆಗಸಕ್ಕೆ ಎತ್ತಿ ಹಾವನ್ನು ಗಂಟಲಿಗೆ ಇಳಿಸಿಕೊಳ್ಳುತ್ತದೆ. ಅಲ್ಲಿಗೆ ಹಾವಿನ ಕಥೆ ಮುಗಿದಂತೆ.

ಈ ಸಮಯದಲ್ಲಿ ನಡೆಯುವ ಕೆಲ ನಾಟಕೀಯ ಘಟನೆಗಳನ್ನು ಹೇಳಬೇಕು. ನನ್ನ ಪಾಲಿಗೆ ಇವು ತೀರಾ ರೋಮಾಂಚನ ಹುಟ್ಟಿಸಿದ ಗಳಿಗೆಗಳಾಗಿದ್ದವು.